# ಗೀತೆಯಲ್ಲಿ 'ಯಜ್ಞ'ದ ತತ್ತ್ವ

ಮಾತಾ ತ್ಯಾಗಮಯೀ

ಪ್ರಪಂಚದಲ್ಲಿ ನಡೆಯುವ ಪ್ರತಿಯೊಂದು ಕ್ರಿಯೆಯೂ ಒಂದೊಂದು ಬಗೆಯ ಯಜ್ಞವೇ. ಈ ದೃಷ್ಟಿಯಿಂದ ನಾವು ಮಾಡುವ ಪ್ರತಿಯೊಂದು ಕರ್ಮವೂ ಯಜ್ಞವಾಗಬೇಕು. ಈ ಮೂಲಕ ನಮ್ಮ ಜೀವನವನ್ನು ಒಂದು ಮಹಾನ್ ಯಜ್ಞದ ಭಾಗವನ್ನಾಗಿಸಿ, ಸಾರ್ಥಕ್ಯವನ್ನು ಕಂಡುಕೊಳ್ಳಬೇಕೆಂಬುದು ಗೀತೆಯ ತತ್ತ್ವ. ಈ ಕುರಿತು ವಿವೇಚಿಸಿರುವ ಲೇಖಕಿ ಚಳ್ಳಕೆರೆ ಶ್ರೀ ಶಾರದಾಶ್ರಮದ ಮುಖ್ಯಸ್ಥರು. ಉತ್ತಮ ಬರಹಗಾರರೂ, ಅನುವಾದಕರೂ, ವಾಗ್ಮಿಯೂ ಆಗಿರುವ ಅವರು ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ಕರ್ಮ ಬದುಕಿನ ಒಂದು ಪ್ರಧಾನ ಮುಖ. ಕೆಲಸ, ಕಾರ್ಯ, ಚಟುವಟಿಕೆ, ಕರ್ತವ್ಯ ಕರ್ಮ ಇವೆಲ್ಲ ಪರ್ಯಾಯ ಪದಗಳು ಎಂದು ಹೇಳಬಹುದು. ಮೊತ್ತಮೊದಲ ಬಾರಿ ಕರ್ಮ ಎಂಬ ವಿಷಯವನ್ನು ಅತ್ಯಂತ ಸಮರ್ಪಕವಾಗಿ ವಿವೇಚಿಸಿದ ಶ್ರೇಯಸ್ಸು ಶ್ರೀಕೃಷ್ಣನದು. ಕರ್ಮವನ್ನು ಸಾಧನೆಯಾಗಿ ಪರಿಗಣಿಸಿದ್ದು ಮಾತ್ರವಲ್ಲ, ಕರ್ಮದಿಂದ ಸಿದ್ಧಿಯೂ (ಪರಿಪೂರ್ಣತೆ, ಮೋಕ್ಷ) ಸಾಧ್ಯ ಎಂದು ಅಧಿಕಾರವಾಣಿಯಿಂದ ಸಾಬೀತುಪಡಿಸಿದವನು ಶ್ರೀಕೃಷ್ಣ. ಕರ್ಮಕ್ಕಾಗಿ ಕರ್ಮ, ಕರ್ತವ್ಯಕ್ಕಾಗಿ ಕರ್ತವ್ಯ ಎಂದು ಮೊತ್ತಮೊದಲ ಬಾರಿ ಭಾರತಭೂಮಿಯಲ್ಲಿ ಉದ್ಘೋಷಿಸಿದ ಪಾಂಚಜನ್ಯವಾಣಿ ಶ್ರೀಕೃಷ್ಣನದು.

ಉಪನಿಷತ್ ಕಾಲದಿಂದಲೂ ಮೋಕ್ಷಕ್ಕೆ ಸಾಧನ ಯಾವುದು, ಜ್ಞಾನವೋ, ಕರ್ಮವೋ ಎಂದು ಬಹು ಬಿರುಸಾಗಿ ಚರ್ಚೆ ನಡೆದಿದೆ. ಭಾರತದ ಅತಿ ಕ್ಲಿಷ್ಟ ಸಮಸ್ಯೆಯಿದು. ಪ್ರತಿಬಾರಿಯೂ ಜ್ಞಾನದಿಂದಲೇ ಮೋಕ್ಷ, ಕರ್ಮದಿಂದಲ್ಲ ಎಂದು ಬ್ರಹ್ಮವಿದರ ಸಭೆಯಲ್ಲಿ ತೀರ್ಮಾನಿಸಲ್ಪಟ್ಟಿತು. **ಚಿತ್ತಸ್ಯ ಶುದ್ಧಯೇ ಕರ್ಮ, ನ ತು ವಸ್ತೂಪಲಬ್ಧಯೇ** *(ವಿವೇಕ ಚೂಡಾಮಣಿ, ೧೧)* — ಕರ್ಮದಿಂದ ಚಿತ್ತಶುದ್ಧಿಯಾಗುತ್ತದೆ, ಜ್ಞಾನದಿಂದ ಬ್ರಹ್ಮವಸ್ತು ಲಾಭವಾಗುವುದು ಎಂದೇ ತೀರ್ಮಾನಿಸಲಾಯಿತು. ಆದರೆ ಶ್ರೀಕೃಷ್ಣ ಇದಕ್ಕಿಂತ ಭಿನ್ನವಾದ, ಈ ಯುಗಧರ್ಮಕ್ಕೆ ತಕ್ಕುದಾದ ನಿಷ್ಕರ್ಷೆಯನ್ನು ನೀಡುತ್ತಾನೆ. ಪುರಾತನ ಕಾಲದಿಂದಲೂ ಎರಡು ನಿಷ್ಠೆಗಳು ಇವೆ–ಜ್ಞಾನನಿಷ್ಠೆ ಮತ್ತು ಕರ್ಮನಿಷ್ಠೆ. ಜ್ಞಾನಯೋಗದಿಂದಲೂ – ನಿತ್ಯಾನಿತ್ಯ ವಸ್ತು ವಿವೇಕ – ಮೋಕ್ಷ ಸಾಧ್ಯ. ಕರ್ಮಯೋಗದಿಂದಲೂ – ಅನಾಸಕ್ತ ಕರ್ಮ, ನಿಷ್ಕಾಮಕರ್ಮದಿಂದಲೂ – ಮೋಕ್ಷಸಾಧ್ಯ. ಆದರೆ **ಕರ್ಮಯೋಗೋ ವಿಶಿಷ್ಯತೇ** – ಕರ್ಮತ್ಯಾಗದ ಮಾರ್ಗಕ್ಕಿಂತ ಕರ್ಮಯೋಗವು ಉತ್ಕೃಷ್ಟವಾದುದೆಂದು ಹೇಳಲು ಶ್ರೀಕೃಷ್ಣ ಹಿಂಜರಿಯಲಿಲ್ಲ. ಏಕೆ 'ಕರ್ಮಯೋಗೋ ವಿಶಿಷ್ಯತೇ'?

ಒಂದು ಕ್ಷಣವೂ ಕರ್ಮ ಮಾಡದೆ ಇರಲು ಯಾರಿಂದಲೂ ಸಾಧ್ಯವಿಲ್ಲ. ಪ್ರಕೃತಿಯ ಮೂರು ಗುಣಗಳೊಂದಿಗೆ, ಸ್ವಭಾವದೊಂದಿಗೆ ತಾದಾತ್ಮ್ಯವಿರುವವರೆಗೆ ಕರ್ಮ ಮಾಡದೆ ಇರಲು ಸಾಧ್ಯವಿಲ್ಲ. ಕರ್ಮ ಮಾಡದೆ ಇರಲು ನಮಗೆ ಸ್ವಾತಂತ್ರ್ಯವಿಲ್ಲ. ಆದರೆ ಯಾವ ರೀತಿ ಕರ್ಮ ಮಾಡುವುದರಿಂದ ಬಂಧನಕ್ಕೊಳಗಾಗದಿರಬಹುದು ಎಂಬ ವಿಷಯದಲ್ಲಿ ಸ್ವಾತಂತ್ರ್ಯವಿದೆ. ಯಾವಾಗ ಕರ್ಮಬಂಧನ ಇಲ್ಲ? ಅನಾಸಕ್ತಿಯಿಂದ, ಫಲಾಪೇಕ್ಷೆಯಿಲ್ಲದೆ ಕರ್ಮ ಮಾಡಿದಾಗ.

ಕರ್ಮ ಬಿಟ್ಟ ಮಾತ್ರಕ್ಕೆ ನಾವು ಗುರಿ ತಲುಪಿದಂತಾಗಲಿಲ್ಲ. ಕರ್ಮ ಆರಂಭ ಮಾಡದಿದ್ದ ಮಾತ್ರಕ್ಕೆ ಸಿದ್ಧಿ ಸಿಗದು. ತನ್ನ ಶ್ರೇಯಸ್ಸನ್ನು ಬಯಸುವ ಸಾಧಕನಿಗೆ ಕರ್ಮ ಬಿಡಬೇಕೆಂಬ ತವಕವು ಜ್ಞಾನಮಾರ್ಗಕ್ಕೆ ಪ್ರವೇಶವನ್ನು ಒದಗಿಸಕೊಡದು.



ಬದಲಾಗಿ ಆಲಸ್ಯ, ಜಡತೆ, ತಮೋಗುಣಕ್ಕೆ ದಾರಿಮಾಡಿ ಕೊಡುತ್ತದೆ.[೧]

ಸಾಧನೆಯ ಹೆಸರಿನಲ್ಲಿ ಕರ್ಮೇಂದ್ರಿಯ, ಜ್ಞಾನೇಂದ್ರಿಯಗಳನ್ನು ನಿಗ್ರಹಿಸಿ ಮನಸ್ಸಿನಿಂದ ವಿಷಯಗಳನ್ನು ಚಿಂತಿಸಿದರೆ ಅವನು ಮಿಥ್ಯಾಚಾರಿ ಎನಿಸುತ್ತಾನೆ. ಮನಸ್ಸಿನಿಂದ ವಿಷಯಗಳನ್ನು ಚಿಂತಿಸುವುದು ಹೊರಗಿನಿಂದ ವಿಷಯಗಳನ್ನು ಭೋಗಿಸಿದಷ್ಟೇ ಅಪಾಯಕರವಾದುದು. ಎರಡರಿಂದಲೂ ಏರ್ಪಡುವ ಸಂಸ್ಕಾರ, ಬಂಧನ ಒಂದೇ ಬಗೆಯದು ಮಾತ್ರವಲ್ಲ ಮನಸ್ಸಿ

---

೧ ಶ್ರೀಮದ್ಭಗವದ್ಗೀತಾ, ಸಾಧಕ ಸಂಜೀವಿನಿ, ಸ್ವಾಮಿ ರಾಮಸುಖದಾಸಜೀ. ಪುಟ ೧೪೪.

ನಿಂದ ವಿಷಯಗಳನ್ನು ಚಿಂತಿಸುವುದು ಇನ್ನಷ್ಟು ಹಾನಿಕರ. ಮನುಷ್ಯ ಜನಭಯಕ್ಕೆ, ಅಪಮಾನಕ್ಕೆ ಹೆದರಿ ಹೊರಗಿನಿಂದ ಭೋಗಗಳನ್ನು, ಅನ್ಯಾಯ, ಕ್ರೌರ್ಯವನ್ನು ಬಿಟ್ಟಿರಬಹುದು. ಆದರೆ ಮನಸ್ಸಿನಿಂದ ಬಿಟ್ಟಿರುವುದಿಲ್ಲ. ಮೇಲಾಗಿ ತಾನು ಒಳ್ಳೆಯವನು, ತಾನು ತ್ಯಾಗ ಮಾಡಿದ್ದೇನೆಂಬ ಮಿಥ್ಯಾ ಅಭಿಮಾನ ಬೇರೆ ತಾಳುತ್ತಾನೆ. ಆದ್ದರಿಂದ ಮನಸ್ಸಿನಿಂದ ಭೋಗಗಳನ್ನು ತ್ಯಜಿಸುವುದೇ ನಿಜವಾದ ತ್ಯಾಗ. ಯಾರು ಮನಸ್ಸನ್ನು ನಿಗ್ರಹಿಸಿ, ಕರ್ಮೇಂದ್ರಿಯಗಳಿಂದ ಕಾರ್ಯಗಳನ್ನು ಮಾಡುತ್ತಾನೋ ಅವನು ನಿಜವಾದ ಕರ್ಮಯೋಗಿ.

ಆದ್ದರಿಂದ ವ್ಯಕ್ತಿ ಕರ್ಮಗಳನ್ನು ಮಾಡದೆ ಇರುವುದಿಲ್ಲ. ನಿಯತಕರ್ಮಗಳನ್ನು ಮಾಡಬೇಕು. ಯಾವುದು ನಿಯತಕರ್ಮ? ತನ್ನ ವರ್ಣ ಆಶ್ರಮ ಸ್ವಭಾವ ಪರಿಸ್ಥಿತಿಗಳಿಗೆ ಅನುಸಾರವಾಗಿ ಇರುವ ಕರ್ತವ್ಯಕರ್ಮಗಳು ನಿಯತ ಕರ್ಮಗಳು. ಆ ಕರ್ಮಗಳನ್ನು ಯಜ್ಞದೃಷ್ಟಿಯಿಂದ ಮಾಡಬೇಕು. ಇಲ್ಲದ್ದಿದ್ದರೆ ವ್ಯಕ್ತಿ ಕರ್ಮದಿಂದ ಬಂಧಿಸಲ್ಪಡುತ್ತಾನೆ.

ಯಜ್ಞ ಎಂದರೇನು? ಶ್ರೀಕೃಷ್ಣ ಯಜ್ಞ ಶಬ್ದಕ್ಕೆ ಹೊಸ ಪರಿಭಾಷೆಯನ್ನು ಕೊಡುತ್ತಾನೆ. ಅದನ್ನು ಯಾಗ, ಯಜ್ಞ, ಹೋಮ ಎಂಬ ಅರ್ಥದಲ್ಲಲ್ಲ, ನೈತಿಕ ಶಬ್ದವಾಗಿ ಬಳಸುತ್ತಾನೆ. ಮೊದಲು ಕೊಡು ನಂತರ ಅನುಭವಿಸು. ಇದು ಯಜ್ಞ. ನಿನ್ನ ಸಂಪಾದನೆಯಲ್ಲಿ ಮೊದಲು ತೆರಿಗೆ ಕಟ್ಟು, ಮೊದಲು ವೃದ್ಧ ತಾಯಿತಂದೆಯರ ಸೇವೆಗೆ ಹಣ ತೆಗೆದಿಡು. ಉಳಿದಿದ್ದು ನಿನಗೆ. ಇದು ಯಜ್ಞ. **ತೇನ ತ್ಯಕ್ತೇನ ಭುಂಜೀಥಾಃ** – ತ್ಯಾಗದಿಂದ ಅನುಭವಿಸು – ಇದು ಯಜ್ಞ. ನೀನು ತೆರಿಗೆ ಕಟ್ಟದೆ, ತಾಯಿತಂದೆಯರ ಸೇವೆಯನ್ನು ಮಾಡದೆ ನಿನ್ನ ಸ್ವಂತಕ್ಕಾಗಿ, ಸ್ವಾರ್ಥಕ್ಕಾಗಿ ಬಳಸಿದರೆ ಅದು ಯಜ್ಞವಾಗದು. ಅದು ಕಳ್ಳತನ – **ಯೋ ಭುಂಕ್ತೇ ಸ್ತೇನ ಏವ ಸಃ** – ಕಳ್ಳನಿಗೆ ಶಿಕ್ಷೆ ತಪ್ಪಿದ್ದಲ್ಲ. ಒಬ್ಬ ಯುವತಿ ವಿವಾಹವಾದ ಹೊಸದರಲ್ಲಿ ತನ್ನ ಸಂಪಾದನೆಯಿಂದ ಅನೇಕ ಬಟ್ಟೆಬರೆಗಳನ್ನು, ಚಿನ್ನಾಭರಣಗಳನ್ನು ಖರೀದಿಸುತ್ತಲೇ ಇರುತ್ತಾಳೆ. ಅದೇ ಒಂದು ಮಗು ಹುಟ್ಟಿದ ಮೇಲೆ ಮೊದಲು ಮಗುವಿನ ಫೀಸ್ ಕಟ್ಟಲು ಹಣ ತೆಗೆದಿಡಬೇಕು, ಬಳಿಕ ಉಳಿದರೆ ತನ್ನ ಆಭರಣಗಳಿಗೆಂದು ಯೋಚಿಸುತ್ತಾಳೆ. ಇದು ಯಜ್ಞದೃಷ್ಟಿ : others first, myself last. ಮೊದಲು ಕೊಡು, ಉಳಿದಿದ್ದು–ಯಜ್ಞಶೇಷ, ಯಜ್ಞಶಿಷ್ಟ –ನಿನಗೆ. ಇದು ಯಜ್ಞ.

ಒಂದು ಮನೆಯಲ್ಲಿ ತಾಯಿ ಅಡುಗೆ ಮಾಡಿ ಮೊದಲು ಮಕ್ಕಳಿಗೆ, ಪತಿಗೆ, ಆಗಮಿಸಿದ ಅತಿಥಿಗಳಿಗೆ ಉಣಬಡಿಸುತ್ತಾಳೆ. ತನಗೆ ಎಷ್ಟೇ ಪ್ರಿಯವಾದ ಅಡುಗೆಯಿದ್ದರೂ ತಾನು ಮೊದಲು ತಿನ್ನುವುದಿಲ್ಲ. ಎಲ್ಲರಿಗೂ ಉಣಬಡಿಸಿ ಬಳಿಕ ಉಳಿದುದನ್ನು ಸೇವಿಸುತ್ತಾಳೆ. ತಮ್ಮ ಹೊಲದಲ್ಲಿ ಬೆಳೆ ಬಂದಾಗ ಮೊದಲ ಫಲವನ್ನು ಅಥವಾ ಫಸಲನ್ನು ದೇವರಿಗೆ ಅರ್ಪಿಸುತ್ತಾರೆ. ಅಥವಾ ಬಡವರಿಗೆ, ಸಾಧುಸಂತರಿಗೆ ಅಥವಾ ಸದ್‌ಬ್ರಾಹ್ಮಣರಿಗೆ ದಾನ ಮಾಡುತ್ತಾರೆ. ಇದು ಯಜ್ಞ. ಒಬ್ಬರು ಬಹಳ ಶೋಕತಪ್ತರಾಗಿ ಅಳುತ್ತಿದ್ದರೆ, ನಾವು ಸುಮ್ಮನೆ ಅವರ ಬಳಿಯಲ್ಲಿ ಕುಳಿತು ಕೊಂಡರೆ ಸಾಕು, ಅವರ ಶೋಕ ಉಪಶಮನವಾಗುತ್ತದೆ.

ಹೀಗೆ ಪ್ರತಿಯೊಬ್ಬ ವ್ಯಕ್ತಿ ಮಾಡುವ ಶಾರೀರಿಕ, ಮಾನಸಿಕ, ವ್ಯಾವಹಾರಿಕ, ಪಾರಮಾರ್ಥಿಕ ಕರ್ಮಗಳು, ಶಾಸ್ತ್ರವಿಹಿತ ಕರ್ಮಗಳು, ಪರೋಪಕಾರಾರ್ಥವಾಗಿ ಮಾಡುವ ಕರ್ಮಗಳು– ಇವನ್ನೆಲ್ಲ ''ನನಗಾಗಿ ಅಲ್ಲ, ಸರ್ವಹಿತಕ್ಕಾಗಿ'' ಎಂಬ ದೃಷ್ಟಿಯಿಂದ ಮಾಡಿದಾಗ ಅದು ಯಜ್ಞ.[೨] ನನಗಾಗಿ ಎಂಬ ದೃಷ್ಟಿಯಿಂದ ಮಾಡಿದಾಗ ಅದು ಅನ್ಯತ್ರಕರ್ಮವಾಯಿತು, ಸಕಾಮ ಕರ್ಮವಾಯಿತು. ಆದರಿಂದ ಬಂಧನ. ಯಜ್ಞ ಎಂದರೆ ತ್ಯಾಗ, ಕೊಡುವುದು, ಹಂಚುವಿಕೆ, ವಿತರಣೆ. ಯಜ್ಞ ಎಂದಾಗ ಅದರಲ್ಲಿ ದಾನ, ತಪಸ್ಸುಗಳೂ ಸೇರಿಕೊಳ್ಳುತ್ತವೆ.[೩] ದಾನದಲ್ಲಿ ವಸ್ತುಗಳನ್ನು ಕೊಡುತ್ತೇವೆ. ತಪಸ್ಸಿನಲ್ಲಿ ಸುಖದ, ಭೋಗದ ತ್ಯಾಗವಿದೆ. ಗೃಹಿಣಿಗೆ ಅಡಿಗೆ ಮಾಡುವುದು ಯಜ್ಞ. ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆ ಯಜ್ಞ. ಡಾಕ್ಟರಿಗೆ ಚಿಕಿತ್ಸೆ ನೀಡುವುದು ಯಜ್ಞ. ನಾವು ಮಾಡುವ ಪ್ರತಿಯೊಂದು ಕರ್ಮವನ್ನು ಆಸಕ್ತಿ, ಸ್ವಾರ್ಥ, ಫಲಾಪೇಕ್ಷೆ ಬಿಟ್ಟು ಮಾಡಿದಾಗ ಅದೇ ಯಜ್ಞ. ಪರಮಾತ್ಮ ಪ್ರಾಪ್ತಿಯ ಸಾಧನಗಳನ್ನೂ ಕೃಷ್ಣ ಐದನೆಯ ಅಧ್ಯಾಯದಲ್ಲಿ ಯಜ್ಞ ಎಂಬ ಶಬ್ದದಿಂದ ಕರೆದಿದ್ದಾನೆ — ದ್ರವ್ಯಯಜ್ಞ, ತಪೋಯಜ್ಞ, ಯೋಗಯಜ್ಞ, ಸ್ವಾಧ್ಯಾಯ–ಜ್ಞಾನಯಜ್ಞ ಇತ್ಯಾದಿ.

ಕೇವಲ ಭೂಲೋಕದ ವ್ಯವಸ್ಥೆ ಮಾತ್ರವಲ್ಲ, ಇಡೀ ಸೃಷ್ಟಿಯಂತ್ರವು ಯಜ್ಞನಿಯಮಾನುಸಾರ ನಡೆಯುತ್ತಿದೆ. ಒಂದು ಹಕ್ಕಿ ಇಂಡೋನೇಷಿಯಾದಿಂದ ಆಫ್ರಿಕಾಕ್ಕೆ ಹಾರಿ ಹೋಗುತ್ತಿದೆ. ಅದರ ಕಾಲಿನ ಬೆರಳುಗಳಲ್ಲಿ ಮಣ್ಣು ಇರುತ್ತದೆ, ಆ ಮಣ್ಣಿನಲ್ಲಿ ಬೀಜ ಇರುತ್ತದೆ. ಹಾರಿ ಹೋಗುವ ಹಕ್ಕಿ ಆ ಮಣ್ಣು ಮತ್ತು ಬೀಜವನ್ನು ಭಾರತದ ಕಾಡಿನಲ್ಲಿ ಬೀಳಿಸುತ್ತದೆ. ಅಲ್ಲಿ ಆ ವೃಕ್ಷರಾಶಿ ಬೆಳೆಯುತ್ತದೆ. ನಾವು ಮನರಂಜನೆಗೆ ಆ ಹಕ್ಕಿಗಳನ್ನು ಕೊಂದು ಹಾಕಿದೆವು, ಇಂದು ಆ ವೃಕ್ಷ ಬೆಳೆಯುತ್ತಿಲ್ಲ. ಹೀಗೆ eco balance - ಪರಿಸರ ಸಮತೋಲನ ನಾಶವಾಯಿತು. ನಾವು ನಮ್ಮ ತೋಟವನ್ನು ಸ್ವಚ್ಛಮಾಡುವ ರಭಸದಲ್ಲಿ ಒಂದೆರಡು ಎರೆಹುಳಗಳನ್ನು ಕೊಂದುಹಾಕಿದೆವು. ಪರಿಣಾಮ ನಮ್ಮ ತೋಟದ ಫಲವತ್ತತೆ ಕಡಿಮೆಯಾಯಿತು. ಹೀಗೆ ಪಶು–ಪಕ್ಷಿ, ಗಿಡ–ಮರಗಳು, ಮನುಷ್ಯ–ಪಿತೃಗಳು, ದೇವತೆಗಳು ಎಲ್ಲರೂ ಪರಸ್ಪರ ''ಕೊಟ್ಟು ಪಡೆ, ಪಡೆಯುತ್ತ ಬೆಳೆ'' ಎಂಬ ಯಜ್ಞವ್ಯವಸ್ಥೆಯ ಮೂಲಕವೇ ಪರಸ್ಪರ ಶ್ರೇಯಸ್ಸನ್ನು ಕಾಣಲು ಸಾಧ್ಯ. ಆಗ ಮಾತ್ರ ವಿಶ್ವಸಮತೋಲನ ಸಾಧ್ಯವಾಗುತ್ತದೆ. ವಿಶ್ವದಲ್ಲಿ Nothing is unrelated. Everyting is interrelated[೪] – ಪ್ರತಿಯೊಂದೂ ಪರಸ್ಪರ ಸಂಬಂಧಪಟ್ಟಿದೆ. ಮನುಷ್ಯ ಜೀವ

---

೨ ಅಲ್ಲೇ, ಪು. ೧೫೮ ೩ ಅಲ್ಲೇ, ಪು. ೧೫೮

೪ Universal Message of Bhagavdgita, Swami Ranganathananda ಪು. ೧೮೬

ನದ ಗತಿ ಸುಖಭೋಗವಲ್ಲ. ಯಾವ ಶಾಸ್ತ್ರವೂ, ಸಮಾಜವೂ ''ಸುಖ ಅನುಭವಿಸು'' ಎಂದು ಆದೇಶಿಸಿಲ್ಲ. ''ಇತರರಿಗೆ ಸುಖ ಕೊಡು'' ಎಂದು ಆದೇಶಿಸಿದೆ.

ಒಂದು ಸಮಾಜ, ರಾಷ್ಟ್ರ, ಮನೆ ನಿಂತಿರುವುದು ಯಜ್ಞತತ್ತ್ವದ ಮೇಲೆ. ಒಬ್ಬ ಗೃಹಸ್ಥ ದುಡಿದು ತರುತ್ತಾನೆ, ಗೃಹಿಣಿ ಅಡಿಗೆ ಮಾಡಿ ಬಡಿಸುತ್ತಾಳೆ. ಮಕ್ಕಳು ತಮ್ಮ ಗುಣ ಪ್ರೀತಿ ವಿಶ್ವಾಸದಿಂದ ಎಲ್ಲರಿಗೂ ಆನಂದ ಕೊಡುತ್ತಾರೆ. ಹೀಗೆ ಎಲ್ಲ ಸೇರಿ ಜೀವನ. ಸ್ವಾರ್ಥತ್ಯಾಗ-ಪ್ರೀತಿಯಲ್ಲಿದೆ ಜೀವನದ ಸ್ವಾರಸ್ಯ. ಸಮುದ್ರ ನದಿಗಳಿಂದ ಎಷ್ಟು ನೀರನ್ನು ಪಡೆಯುತ್ತದೆಯೊ ಎಲ್ಲವನ್ನೂ ಮಳೆಯ ರೂಪದಲ್ಲಿ ಮರಳಿ ಕೊಡುತ್ತದೆ. ಸರಕಾರ ತೆರಿಗೆ ಹಾಕಿ ಜನಗಳಿಂದ ಹಣ ಪಡೆಯುತ್ತದೆ. ಅದಕ್ಕೆ ತಕ್ಕಂತೆ ವಿದ್ಯುಚ್ಛಕ್ತಿ, ನೀರು, ವಿದ್ಯೆ, ಸಾರ್ವಜನಿಕ ಆಸ್ಪತ್ರೆ , ದೇಶರಕ್ಷಣೆ — ಇತ್ಯಾದಿ ನಾಗರಿಕ ಸೌಕರ್ಯಗಳನ್ನು ಒದಗಿಸುತ್ತದೆ. ಇವೆಲ್ಲ ಯಜ್ಞಚಕ್ರ. ದೇಹದ ಎಲ್ಲ ಕಡೆಯಿಂದ ಉಪಯೋಗಿಸಲ್ಪಟ್ಟ ರಕ್ತ ಹೃದಯಕ್ಕೆ ಬರುತ್ತದೆ. ಹೃದಯ ಶುದ್ಧ ರಕ್ತವನ್ನು ದೇಹದ ಎಲ್ಲ ಭಾಗಗಳಿಗೆ ಕಳುಹಿಸುತ್ತದೆ. ಹೀಗೆ ಯಜ್ಞದಿಂದ ವೃದ್ಧಿ, ಯಜ್ಞದಿಂದ ವಿಕಾಸ, ಕೊಟ್ಟು ಪಡೆಯುವ ಪಡೆಯುತ್ತ ಕೊಡುವ ಮೂಲಕ ನಿಮ್ಮ ಇಷ್ಟಪ್ರಾಪ್ತಿ. ಅದೇ ನಿಮ್ಮ ಪಾಲಿನ ಕಾಮಧೇನು-ಬಯಸಿದ್ದನ್ನು ನೀಡುವ ಕಾಮಧೇನು.

**ವೃಕ್ಷಕಲ್ಲ ವೃಕ್ಷದ ಫಲವು**
**ನದಿಯ ನೀರು ನದಿಗಲ್ಲ ।**
**ಸಂತನ ಬದುಕು ಸಂತನಿಗಲ್ಲ**
**ಅದು ಲೋಕದ ಹಿತಕೆ - ಕಬೀರಾ ॥**

ಕೊಟ್ಟು ಪಡೆಯುವ ದೃಷ್ಟಿ ಇರುವ ಕಡೆ ಸಮಾಜ ಬಲ ಶಾಲಿಯಾಗುತ್ತದೆ, ಪ್ರಗತಿಪರವಾಗುತ್ತದೆ. ಕೊಟ್ಟು ಪಡೆಯುವ ಗುಣ ಇಲ್ಲದೆ ಕೇವಲ ಪಡೆಯುವುದನ್ನೇ ಯೋಚಿಸಿದಾಗ ಆ ಸಮಾಜ ಅವನತಿಯೆಡೆಗೆ ಹೆಜ್ಜೆಯಿಡುತ್ತದೆ. ಗ್ರೀಕ್ ಇತಿಹಾಸ ಏನಾಯಿತು? ಕೌರವರ ಕಥೆ ಏನಾಯಿತು?

ಸಂತ ಮಹಾತ್ಮರು ಪಡೆಯುವ ಯೋಚನೆಯನ್ನೇ ಬಿಟ್ಟು ಕೇವಲ ಕೊಡುತ್ತಾರೆ, ಕೊಡುತ್ತಲೇ ಹೋಗುತ್ತಾರೆ, ತಮ್ಮ ಸರ್ವಸ್ವವನ್ನೂ ಕೊಡುತ್ತಾರೆ. ಒಂದು ಕುರಿಮರಿಯ ಪ್ರಾಣವನ್ನು ಉಳಿಸಲು ತನ್ನ ಪ್ರಾಣವನ್ನೇ ಕೊಡಲು ಮುಂದೆ ಬಂದ ಬುದ್ಧನದು ಮಹಾಯಜ್ಞ. ಒಂದು ಪಾರಿವಾಳದ ಪ್ರಾಣವನ್ನು ರಕ್ಷಿಸಲು ತನ್ನ ತೊಡೆಯ ಮಾಂಸವನ್ನು ಕತ್ತರಿಸಿ ಕೊಟ್ಟ ಶಿಬಿ ಚಕ್ರವರ್ತಿಯದು ಮಹಾಯಜ್ಞ. ಲೋಕಕಂಟಕನಾದ ವೃತ್ರಾಸುರನನ್ನು ಸಂಹರಿಸಲು ತನ್ನ ದೀರ್ಘಕಾಲದ ತಪಸ್ಸಿನಿಂದ ಅರ್ಜಿಸಿದ ಬೆನ್ನಮೂಳೆಯನ್ನೇ ಹಿಂದೆ ಮುಂದೆ ನೋಡದೆ ಕೊಟ್ಟಂತಹ ಮಹರ್ಷಿ ದಧೀಚಿಯದು ಮಹಾಯಜ್ಞ. ನಾಯಿ ಯೊಂದು ಹಸಿದಿರುವವರೆಗೆ ಅದಕ್ಕೆ ಅನ್ನ ಕೊಟ್ಟು ನೋಡಿ ಕೊಳ್ಳುವುದೇ ನನ್ನ ಪಾಲಿನ ಧರ್ಮ ಎಂದು ಹೇಳಿದ ಸ್ವಾಮಿ ವಿವೇಕಾನಂದರು ಲೋಕಹಿತಕ್ಕಾಗಿ ಎಂತಹ ಮಹಾಯಜ್ಞವನ್ನು ಮಾಡಿದರು! ಭಗವಂತನೇ ವಿಶ್ವವಾಗಿದ್ದಾನೆ, ಆದ್ದರಿಂದ ಅವನ ಸೇವೆ, ಅವನ ಪೂಜೆ, ಲೋಕಹಿತಕಾಮನೆ ಯಜ್ಞವೇ.

**ಸರ್ವಶಾಸ್ತ್ರಪುರಾಣೇಷು ವ್ಯಾಸಸ್ಯ ವಚನಂ ಧ್ರುವಮ್ ।**
**ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ ॥**

ಎಲ್ಲ ಶಾಸ್ತ್ರಪುರಾಣಗಳಲ್ಲಿ ವ್ಯಾಸರ ಸರ್ವಶ್ರೇಷ್ಠ ವಚನ ವೆಂದರೆ ಪರೋಪಕಾರವೇ ಪುಣ್ಯ. ಪರಪೀಡನೆಯೇ ಪಾಪ.

ಇನ್ನು ಸರ್ವಜೀವಿಗಳ ದುಃಖವನ್ನು ತಾನೇ ಅನುಭವಿಸು ವಂತಾಗಬೇಕು ಎಂದು ಪ್ರಾರ್ಥಿಸಿದ, ತಾನು ೪೦ ದಿನಗಳಿಂದ ಹಸಿದಿದ್ದರೂ ತನ್ನ ಭಿಕ್ಷೆಯನ್ನು, ಕೊನೆಗೆ ಜಲವನ್ನು ದಾನ ಮಾಡಿದ ರಾಜ ರಂತಿದೇವನದು ಎಂತಹ ಮಹಾನ್ ಯಜ್ಞ!

**ನ ಕಾಮಯೇಽಹಂ ಗತಿಮೀಶ್ವರಾತ್ ಪರಾ-**
**ಮಷ್ಟರ್ದ್ಧಿಯುಕ್ತಾಮ ಪುನರ್ಭವಂ ವಾ।**
**ಆರ್ತಿಂ ಪ್ರಪದ್ಯೇಽಖಿಲದೇಹಭಾಜಾ**
**ಮಂತಃ ಸ್ಥಿತೋ ಯೇನ ಭವಂತ್ಯದುಃಖಾಃ ॥**

*( ಭಾಗವತ ೯.೨೧.೧೨)*

'ನನಗೆ ಅಷ್ಟಸಿದ್ಧಿ ಬೇಡ, ಮೋಕ್ಷ ಬೇಡ, ಎಲ್ಲ ಜೀವಿಗಳ ಹೃದಯದಲ್ಲಿ ನಾನು ನೆಲಸಿ ಅವರ ದುಃಖತಾಪವನ್ನು ನಾನು ಅನುಭವಿಸುವಂತಾಗಲಿ, ಅವರ ಭಾರ ಕಡಿಮೆಯಾಗಲಿ' - ಇದು ರಂತಿದೇವನ ಪ್ರಾರ್ಥನೆ. ಮಾನವ ಮಂಗಳಕ್ಕಾಗಿ ಮಹಾನ್ ಸೇವಾಯಜ್ಞವನ್ನು ಮಾಡಿದ ಸ್ವಾಮಿ ಅಖಂಡಾ ನಂದರೂ ಈ ಪ್ರಾರ್ಥನೆಯನ್ನು ಸದಾ ಹೇಳಿಕೊಳ್ಳುತ್ತಿದ್ದರು.



ಯಜ್ಞತತ್ತ್ವದ ಹಿನ್ನೆಲೆಯಲ್ಲಿರುವ ವಿಚಾರ ನನ್ನ ಸುಖಕ್ಕೆ ನಾನೊಬ್ಬನೇ ಕಾರಣ ಅಲ್ಲ. ಸಮಾಜದ ಇತರ ಜೀವರಾಶಿಗಳು ದುಃಖದಲ್ಲಿದ್ದರೆ, ಕಷ್ಟದಲ್ಲಿದ್ದರೆ ನಾನು ಸುಖಿಯಾಗಿರಲು ಸಾಧ್ಯವಿಲ್ಲ. ಹೀಗೆ ಯಜ್ಞದ ಹಿಂದಿರುವ ತತ್ತ್ವ – ಸೇವಾಭಾವನೆ. ಕೇವಲ ಪಡೆಯುವುದಲ್ಲ, ಕೊಡುವುದನ್ನು ಕಲಿಯುವುದು, ಕೊಡುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು.

**ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ ।**
**ಭುಂಜತೇ ತೇ ತ್ವಘಂ ಪಾಪಾ ಯೇ ಪಚಂತ್ಯಾತ್ಮಕಾರಣಾತ್ ॥**

*(ಗೀತೆ, ೩. ೧೩)*

'ಯಜ್ಞಮಾಡಿ ಉಳಿದುದನ್ನು ಸೇವಿಸುವವನು ಎಲ್ಲ ದೋಷಗಳಿಂದ ಪಾರಾಗುತ್ತಾನೆ. ಆದರೆ ಯಾರು ತಮಗೋಸ್ಕರವೇ ಬೇಯಿಸಿಕೊಳ್ಳುತ್ತಾರೆಯೋ ಅವರು ಪಾಪವನ್ನೇ ಉಣ್ಣುತ್ತಾರೆ.'

ಭಗವಂತ ನಮಗೆ ನೀಡಿದ ಶರೀರ, ಪ್ರತಿಭೆ, ಸಂಪತ್ತು, ಬಲ, ಯೋಗ್ಯತೆ, ಪದವಿ, ಅಧಿಕಾರ, ಐಶ್ವರ್ಯ, ಗುಣಶೀಲ ಪಾಂಡಿತ್ಯ–ಅದು ನಮ್ಮದಲ್ಲ. ಅದಕ್ಕೆ ನಾವು ಟ್ರಸ್ಟಿಗಳು ಅಷ್ಟೇ. ಭಗವಂತ ನಮಗೆ ಅವನ್ನು ಕೊಟ್ಟಿರುವುದು ಸರ್ವಹಿತಕ್ಕಾಗಿ. ಅವನ್ನು ನಾವು ಇತರರ ಸೇವೆಗೆ ಉಪಯೋಗಿಸಬೇಕು. ಭಗವಂತನಿಂದ ದೊರೆತ ವಸ್ತುಗಳನ್ನು ''ನನ್ನದು'' ಎಂದು ಭಾವಿಸುವುದು, ''ತನಗಾಗಿ ಮಾತ್ರ'' ಎಂದು ಬಯಸುವುದು ಪಾಪ. ತನ್ನ ಸುಖಕ್ಕಾಗಿ ಎಂದು ದುಡಿಯುವುದು ಪಾಪ, ಇತರರ ಸುಖಕ್ಕಾಗಿ ಎಂದು ದುಡಿಯುವುದು ಪುಣ್ಯ, ನಾವು ಭುಂಜತೇ ಪಾಪಾ –ಪಾಪವನ್ನು ಉಣ್ಣುವುದು ಬೇಡ, ಪುಣ್ಯವನ್ನು– ಭುಂಜತೇ ಪುಣ್ಯಾಃ– ಉಣ್ಣೋಣ.

ಶರೀರದ ಪ್ರತಿಯೊಂದು ಅವಯವವೂ ಇರುವುದು ಶರೀರಕ್ಕಾಗಿ, ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಇರುವುದು ಸಮಾಜಕ್ಕಾಗಿ, ಸ್ವಾರ್ಥಕ್ಕಾಗಿ ಅಲ್ಲ. ಆದ್ದರಿಂದ ಭಗವಂತ ಕೊಟ್ಟಿದ್ದನ್ನು ಭಗವಂತನಿಗೆ, ಭಗವಂತನ ಮಕ್ಕಳಿಗೆ ಅರ್ಪಿಸದೆ ತನಗೆ ಎಂದು ಸೀಲ್ ಹಾಕಿದರೆ ಬಂಧನ. 'ಗಂಗಾ ಜಲೇ ಗಂಗಾ ಪೂಜಾ' – ಗಂಗೆಯಿಂದಲೇ ಗಂಗೆಯ ಪೂಜೆ ಮಾಡುವಂತೆ, ಅವನು ಅನುಗ್ರಹಿಸಿದುದರಿಂದಲೇ ಅವನ ಪೂಜೆಯನ್ನು ಮಾಡುವುದು–ನಾನು ಇನ್ನೊಬ್ಬರಿಗೆ ಒಳಿತನ್ನು ಮಾಡಿದೆ ಎಂದು ಭಾವಿಸಿದರೆ ಅಭಿಮಾನದ ಬಂಧನ ಬಿಗಿಯುತ್ತದೆ.

ನಾವು ಪ್ರಕೃತಿಯಿಂದ, ಸಹಮಾನವರಿಂದ, ಪಶುಪಕ್ಷಿ, ಗಿಡಮರಗಳಿಂದ, ದೇವ, ಋಷಿ ಪಿತೃಗಳಿಂದ ಪಡೆದಿದ್ದೇವೆ. ಪಡೆಯುತ್ತಲೇ ಇದ್ದೇವೆ. ನಾವು ಅವರಿಗೆ ಋಣಿ. ಆ ಋಣಮುಕ್ತರಾಗಲು ಪಂಚ ಮಹಾಯಜ್ಞಗಳನ್ನು ಮಾಡಬೇಕು.

೧) **ದೇವಯಜ್ಞ**–ದೇವದೇವಿಯರ ಪೂಜೆ, ವ್ರತ ಉಪವಾಸ, ಹೋಮಹವನ, ದೇವಸ್ಥಾನ ದರ್ಶನ ಇವೆಲ್ಲ ದೇವಯಜ್ಞಕ್ಕೆ ಸೇರಿದವು.

೨) **ಋಷಿಯಜ್ಞ**–ಶಾಸ್ತ್ರಗಳ, ಸದ್ಗ್ರಂಥಗಳ ಅಧ್ಯಯನ–ಅಧ್ಯಾಪನ, ಅವುಗಳ ಅನುಷ್ಠಾನ

೩) **ಪಿತೃಯಜ್ಞ** –ಪಿತೃಗಳಿಗೆ ಮಾಡುವ ಶ್ರಾದ್ಧ, ತರ್ಪಣ ಕಾರ್ಯ

೪) **ನರಯಜ್ಞ**–ಸಹಮಾನವರಿಗೆ ನೀಡುವ ಸೇವೆ.

೫) **ಭೂತಯಜ್ಞ**–ಗಿಡಮರಗಳಿಗೆ, ಸರ್ವಜೀವಿಗಳಿಗೆ ನಮ್ಮಿಂದಾದ ಸೇವೆ

ಮನುಷ್ಯ ತನ್ನ ಈ ಕರ್ತವ್ಯಯಜ್ಞಗಳನ್ನು ಮಾಡದಿದ್ದಾಗಲೇ ಅತಿವೃಷ್ಟಿ, ಅನಾವೃಷ್ಟಿ, ಭೂಕಂಪ, ಸುನಾಮಿಯಂತಹ ಪ್ರಾಕೃತಿಕ ವಿಕೋಪಗಳು ಸಂಭವಿಸುವುದು. ವ್ಯಕ್ತಿ ತನ್ನ ಕರ್ತವ್ಯ ಕರ್ಮಗಳನ್ನು ನಿಷ್ಠೆಯಿಂದ, ಶ್ರದ್ಧೆಯಿಂದ ಮಾಡುವುದರಿಂದ ಯೋಗಿಯಾದವನು ಧ್ಯಾನದಿಂದ ಪಡೆಯುವ ಸಂಸಿದ್ಧಿಯನ್ನೇ, ಪಡೆಯುತ್ತಾನೆ. **ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದಂತಿ ಮಾನವಃ**–ಸ್ವಕರ್ಮದಿಂದ ಭಗವಂತನನ್ನು ಆರಾಧಿಸುವವನು ಸಿದ್ಧಿಯನ್ನು ಪಡೆಯುತ್ತಾನೆ. ಇನ್ನೊಬ್ಬರ ಕರ್ತವ್ಯ ವೇನೆಂದು ನೋಡುವುದು ನಮ್ಮ ಕರ್ತವ್ಯವಲ್ಲ. ಅದರಿಂದ ನಮಗೇ ಹಾನಿ. ನಾವು ಇನ್ನೊಬ್ಬರಿಗೆ ಒಳಿತನ್ನು ಮಾಡಬೇಕು. ಇತರರು ನಮಗೆ ಒಳಿತನ್ನು ಮಾಡಲಿ ಎಂದು ಏಕೆ ಬಯಸಬೇಕು? ನಾವು ಇನ್ನೊಬ್ಬರಿಗೆ ಒಳ್ಳೆಯದನ್ನು ಮಾಡಬೇಕು. ಆದರೆ ನಾನು ಇನ್ನೊಬ್ಬರಿಗೆ ಒಳ್ಳೆಯದನ್ನು ಮಾಡಿದೆ ಎಂದು ಭಾವಿಸುವುದು ಅಭಿಮಾನ. ಅಭಿಮಾನ ಬಂದರೆ ಸೇವೆಯಲ್ಲಿ ಲೋಪ ಬಂತು.[೫]

ಯಜ್ಞಮಾಡಿ ಉಳಿದ ಆಹಾರ ಪ್ರಸಾದ. ಯಜ್ಞವಿಲ್ಲದ ಆಹಾರದಿಂದ ನಾವು ಪಾಪವನ್ನು ಉಣ್ಣುವುದು ಬೇಡ, ಪುಣ್ಯವನ್ನು ಉಣ್ಣೋಣ. **ತಸ್ಮಾತ್ ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಮ್**–ಸರ್ವವ್ಯಾಪಿಯಾದ ಬ್ರಹ್ಮವಸ್ತುವು ಯಜ್ಞದಲ್ಲಿ ಪ್ರತಿಷ್ಠಿತವಾಗಿದೆ.

೧. ಯಡತೊರೆ ಮಠದ ಶ್ರೀಗಳು ಬೆಂಗಳೂರಿನ ಅರಮನೆ ಮೈದಾನದಲ್ಲಿ ಒಂದು ಲಕ್ಷ ಜನರನ್ನು ಸೇರಿಸಿ '**ಸೌಂದರ್ಯ ಲಹರಿ**' ಪಾರಾಯಣವನ್ನು ಮಾಡಿಸಿದರು. ತಸ್ಮಾತ್ ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಮ್–ಸರ್ವವ್ಯಾಪಿಯಾದ ಬ್ರಹ್ಮವು ಯಜ್ಞದಲ್ಲಿ ಪ್ರತಿಷ್ಠಿತವಾಗಿದೆ.

೨. ಹರಿದ್ವಾರದ ಶ್ರೀರಾಮಕೃಷ್ಣ ಸೇವಾಶ್ರಮದಲ್ಲಿ ಕಳೆದ ೧೨೦ ವರ್ಷಗಳಿಂದ ಪ್ರತಿದಿನವೂ ಹತ್ತು ಹಲವು ಬ್ರಹ್ಮಚಾರಿಗಳು ಡಾಕ್ಟರುಗಳು ಜೀವರಲ್ಲಿ ಶಿವನನ್ನು ಕಾಣುತ್ತ, ರೋಗಿ ಶಿವನ ಸೇವೆಯನ್ನು ಮಾಡುತ್ತಿದ್ದಾರೆ. ತಸ್ಮಾತ್ ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಮ್–ಸರ್ವವ್ಯಾಪಿಯಾದ ಬ್ರಹ್ಮವು ಯಜ್ಞದಲ್ಲಿ ಪ್ರತಿಷ್ಠಿತವಾಗಿದೆ.

---

೫ ಶ್ರೀಮದ್ಭಗವದ್ಗೀತಾ, ಸಾಧಕ ಸಂಜೀವಿನಿ ಪು. ೧೬೧





ಪಪ್ಪಾ ರಾಮದಾಸ್ ಹಾಗೂ ಆನಂದಾಶ್ರಮ, ಕಾಞಂಗಾಡ್

೩. ಕಾಞಂಗಾಡಿನ ಪಪ್ಪಾ ರಾಮದಾಸರ ಆಶ್ರಮದಲ್ಲಿ ದಿನಂಪ್ರತಿ ದೇಶದ ವಿವಿಧ ಸ್ಥಳಗಳಿಂದ ಆಸ್ತಿಕ ಶ್ರದ್ಧಾಳುಗಳು ಆಗಮಿಸಿ ಆಶ್ರಮದ ಪುಣ್ಯ ನೆಲದಲ್ಲಿ ಕೆಲದಿನ ವಾಸಿಸಿ ಬೆಳಗ್ಗೆ ೬-೦೦ರಿಂದ ಸಾಯಂ ೬-೦೦ರ ವರೆಗೆ ಅಖಂಡ ರಾಮನಾಮ ಜಪದಲ್ಲಿ ಭಾಗವಹಿಸಲು ಬೇಕಾದ ಎಲ್ಲ ಅನುಕೂಲಗಳನ್ನು ಒದಗಿಸಲಾಗುತ್ತದೆ. ತಸ್ಮಾತ್ ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಮ್-ಸರ್ವವ್ಯಾಪಿಯಾದ ಬ್ರಹ್ಮವು ಯಜ್ಞದಲ್ಲಿ ಪ್ರತಿಷ್ಠಿತವಾಗಿದೆ.

ಇಂತಹ ಉದಾಹರಣೆಗಳು ಸಾವಿರ ಸಾವಿರ ; ನಿಷ್ಕಾಮ ಕರ್ಮ ನಡೆಯುವೆಡೆಯಲ್ಲೆಲ್ಲ ಭಗವಂತನೇ ನೆಲೆಸಿದ್ದಾನೆ.

ಶ್ರೀಕೃಷ್ಣ ಹೇಳಿದ ಯಜ್ಞಚಕ್ರವನ್ನು ಯಾರು ಅನುಸರಿಸುವುದಿಲ್ಲವೋ ಅವನು ಅಘಾಯು-ಪಾಪಿ ಜೀವನ, ಇಂದ್ರಿಯಾರಾಮೋ-ಇಂದ್ರಿಯಗಳಲ್ಲೇ ಅವನ ಜೀವನವಿದೆ. ಅದು ಅತ್ಯಂತ ತುಚ್ಛವಾದುದು. ವ್ಯಕ್ತಿಗಳು ಇಂದ್ರಿಯಾರಾಮೋ ಆದಷ್ಟು ವ್ಯಕ್ತಿ ದುರ್ಬಲರಾಗುತ್ತಾರೆ, ಸಮಾಜ ದುರ್ಬಲವಾಗುತ್ತದೆ, ಅವನತಿ ಯೆಡೆಗೆ ಸಾಗುತ್ತದೆ.

ಪ್ರತಿಯೊಬ್ಬರೂ ಒಂದು ಕ್ಷಣ ಬಿಡದೆ ಕರ್ಮ ಮಾಡುತ್ತಲೇ ಇದ್ದಾರೆ. ಆದರೆ ಒಬ್ಬ ವ್ಯಕ್ತಿ ಮಾತ್ರ ಕರ್ಮ ಮಾಡಬೇಕಿಲ್ಲ. ಅವನು ,

**ಯಸ್ತ್ವಾತ್ಮರತಿರೇವಸ್ಯಾದ್ ಆತ್ಮತೃಪ್ತಶ್ಚ ಮಾನವಃ ।**
**ಆತ್ಮನ್ಯೇವ ಚ ಸಂತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ ॥**

*(ಗೀತೆ, ೩.೧೭)*

ಯಾರು ಆತ್ಮನಲ್ಲಿಯೇ ಪ್ರೀತಿಯುಳ್ಳವನೋ, ಆತ್ಮನಲ್ಲಿಯೇ ತೃಪ್ತನಾಗಿದ್ದಾನೆಯೋ, ಆತ್ಮನಲ್ಲಿಯೇ ಸಂತುಷ್ಟನಾಗಿದ್ದಾನೆಯೋ ಅವನಿಗೆ ಯಾವ ಕರ್ತವ್ಯವೂ ಇಲ್ಲ.

ಅವನು ಅಕಾಮ, ಆತ್ಮಕಾಮ, ಪೂರ್ಣಕಾಮ. ಅವನಿಗೆ ಯಾವ ಕಾಮಗಳಿಲ್ಲ. ಕಾಮಗಳಿದ್ದರೆ ಕರ್ಮ. ಕಾಮಗಳಿರುವಾಗ ಅವನಿಗೆ ವಿಧಿ ನಿಷೇಧಗಳು. ಅವನಿಗೆ ಯಾವ ವಿಧಿ ನಿಷೇಧಗಳಿಲ್ಲ. ವಿಷಯವಸ್ತುಗಳಲ್ಲಿ ಯಾವತ್ತೂ ರತಿ, ತೃಪ್ತಿ, ಸಂತುಷ್ಟಿ ಸಾಧ್ಯವಿಲ್ಲ. ಏಕೆ? ವಿಷಯವಸ್ತು ದೊರೆತಾಗಲೂ ಕಾಮನೆಗಳು ಈಡೇರುವುದಿಲ್ಲ, ಅಧಿಕವಾಗುತ್ತದೆ. ಕಾಮನೆಗಳಿಂದ ಬೇಕು ಎಂಬ ರಸ, ರಾಗ ಉಂಟಾಗುತ್ತದೆ. ವಿಷಯಗಳು ಲಭಿಸುತ್ತಿರುವವರೆಗೆ ಅವನ್ನು ರಕ್ಷಿಸುವ ಭಾರ, ಅವು ಹೊರಟು ಹೋದರೆ ಎಂಬ ಚಿಂತೆ. ವಿಷಯಗಳಿಗೆ ವಶರಾಗಿರುವ ಪರಾಧೀನತೆ ಬೇರೆ. ಆದ್ದರಿಂದ ವಿಷಯಗಳಲ್ಲಿ ಯಾವತ್ತೂ ತೃಪ್ತಿ, ರತಿ, ಸಂತುಷ್ಟಿ ಲಭಿಸುತ್ತದೆ.

ಅವನು ಯಾವ ಕಾರ್ಯವನ್ನೂ ಮಾಡಬೇಕಾಗಿಲ್ಲ ಅವನು ತನ್ನ ಇರುವಿಕೆಯಿಂದಲೇ ಎಲ್ಲರಿಗೂ ಒಳಿತನ್ನುಂಟು ಮಾಡುತ್ತಾನೆ. ಅವನು ಈ ಭೂಮಿಯಲ್ಲಿ ಸಾರವಸ್ತು. ಅವನು ಯಾವ ಕಾಮನೆಗಳೂ ಇಲ್ಲದ ಪೂರ್ಣನು. ಅವನು ಜೀವವಿಕಾಸದ ತುದಿಯನ್ನು ತಲುಪಿದವನು.[೬] ಆದ್ದರಿಂದ ಅವನು ಯಾವ ಕಾರ್ಯವನ್ನು ಮಾಡಬೇಕಾಗಿಲ್ಲ. ಅವನು ನಿತ್ಯಮುಕ್ತ. ಅವನು ಮಾನವತೆಗೆ ವರದಾನ ಆದರೆ ಸ್ವಾರಸ್ಯವೇನೆಂದರೆ, ಅವನೇ ಲೋಕಹಿತಕಾಮಪ್ರೇರಿತನಾಗಿ ಮಹತ್ ಕರ್ಮಗಳನ್ನು ಮಾಡುತ್ತಾನೆ. ಅವನು ಅನುಭವಿಸುವ ಮಹಾಶಾಂತಿಯನ್ನು ನಾವು ಊಹಿಸಲೂ ಆರೆವು. ಕಲ್ಪಿಸಲೂ ಆರೆವು.

**ಪರಮಾತ್ಮಾಹಂ ಪರಿಪೂರ್ಣೋಽಹಂ**
**ಬ್ರಹ್ಮೈವಾಹಮಮಹಂ ಬ್ರಹ್ಮೇತಿ ॥**

ನಾನು ಪರಮಾತ್ಮ, ನಾನು ಪರಿಪೂರ್ಣ, ನಾನು ಬ್ರಹ್ಮ ಎಂದು ಅವನು ಪೂರ್ಣಾನಂದದಲ್ಲಿ ವಿಭೋರನಾಗಿರುತ್ತಾನೆ. ಅವನು ಜೀವನದ ಗುರಿ ಬ್ರಾಹ್ಮೀಸ್ಥಿತಿ, ಸ್ಥಿತಪ್ರಜ್ಞತ್ವ, ಪರಿಪೂರ್ಣತೆಯನ್ನು ಪಡೆದು ಅದರಲ್ಲೇ ಪ್ರತಿಷ್ಠಿತನಾಗಿರುತ್ತಾನೆ.

---

೬ Universal Message of Bhagavad Gita, Swami Ranganathananda ಪುಟ. ೨೭೯